ವರ್ಷ	ಖರ್ಚಾದ ಹಣ (ರೂ. ಲಕ್ಷಗಳಲ್ಲಿ)	ರಸ್ತೆಯ ಉದ್ದ	ಕೆಲಸದ ವಿವರ
1	2	3	4
1997-98	4.50	0.0 ರಿಂದ 1.50 ಕಿ.ಮೀ.	0.00 ರಿಂದ 1.50 ಕಿ.ಮೀ.ವರೆಗೆ ಮಣ್ಣಿನ ಕೆಲಸ. ಮುರಂ ಕೇಸಿಂಗ್ ಮತ್ತು ಕನ್‌ಸಾಲಿಡೇಶನ್ ಮಾಡಲಾಗಿದೆ.
1998-99	2.60	0.00 ರಿಂದ 1.50 ಕಿ.ಮೀ.	0.00 ರಿಂದ 1.50 ಕಿ.ಮೀ.ವರೆಗೆ ಎರಡನೇಯ ಕೋಟ್ ಮುರಂ ಕೇಸಿಂಗ್ ಸೈಡ್ ಬರ್ಮ್ ಮುರಂ ಕೋಟ್ ಹಾಗೂ ಮೆಟಲಿಂಗ್ ಮಾಡಲಾಗಿದೆ.
1999-2000	0.50	1.50 ರಿಂದ 2.50ವರೆಗೆ	ಆಯ್ದ ಭಾಗಗಳಲ್ಲಿ ತಗ್ಗುಗಳಲ್ಲಿ ಮುರಂ ತುಂಬಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಸದರಿ ರಸ್ತೆಯು 0.00 ಕಿ.ಮೀ. ನಿಂದ 1.50 ಕಿ.ಮೀ.ವರೆಗೆ ಸರಿ ಇದ್ದು, ಉಳಿದ 1.50 ಕಿ.ಮೀ. ನಿಂದ 4.00 ಕಿ.ಮೀ.ವರೆಗಿನ ರಸ್ತೆಯನ್ನು 2000- 200.1ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಂಡು ಸರಿಪಡಿಸಲಾಗುವುದು.

ಶಿಕಾರಿಪುರ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಯೋಜನೆಗಳು

254 (2373) ಶ್ರೀ ಮಹಾಲಿಂಗಪ್ಪ (ಶಿಕಾರಿಪುರ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಕಾರಿಪುರ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಹಮ್ಮಿಕೊಳ್ಳಲಾದ ಕುಡಿಯುವ ನೀರಿನ ಯೋಜನೆಗಳ ಸಂಖ್ಯೆ ಎಷ್ಟು?

ಆ) ಕಳೆದ 3 ವರ್ಷಗಳಲ್ಲಿ ಮಂಜೂರಾದ ಗ್ರಾಮೀಣ ಅಭಿವೃದ್ಧಿ ನೀರು ಸರಬರಾಜು ಯೋಜನೆಗಳಲ್ಲಿ ಮಂಜೂರಾದ ತಿಮ್ಲಾಪುರ ಮಳೂರು, ಅಗ್ರಹಾರ ಮುಚಡಿ ಗ್ರಾಮಗಳಲ್ಲಿ ಕಳಪೆ ಮಟ್ಟದ ಕಾಮಗಾರಿ ನಡೆದಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆಯೇ?

ಇ) ತಿಮ್ಲಾಪುರ ಹಾಗೂ ಮಳೂರು ಗ್ರಾಮದಲ್ಲಿ ನಿರ್ಮಿಸಿರುವ ಟ್ಯಾಂಕುಗಳಲ್ಲಿ ಕಳಪೆ ಮಟ್ಟದ ಕಾಮಗಾರಿಯಿಂದ ನೀರು ನಿಲ್ಲದೇ ಇರುವುದು ಗಮನಕ್ಕೆ ಬಂದಿದೆಯೇ?

ಈ) ಈ ಕೆಲಸ ನಿರ್ವಹಿಸಿದ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಶಿಕಾರಿಪುರ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ 70 ಕೊಳವೆ ನೀರು ಸರಬರಾಜು ಯೋಜನೆಗಳು, 121 ಕಿರುನೀರು ಸರಬರಾಜು ಯೋಜನೆಗಳು ಮತ್ತು 871 ಕೈಪಂಪು ಕೊಳವೆ ಬಾವಿಗಳನ್ನು ಒದಗಿಸಲಾಗಿದೆ.

ಆ) ತಿಮ್ಲಾಪುರ ಗ್ರಾಮದ ಕೊಳವೆ ನೀರು ಸರಬರಾಜು ಯೋಜನೆಯ ಕಾಮಗಾರಿಗಳ ಅನುಷ್ಠಾನದಲ್ಲಿ ಕೆಲವು ಲೋಪದೋಷಗಳಾಗಿದ್ದು ಅವುಗಳನ್ನು ಸರಿಪಡಿಸಿರುವುದು ಮತ್ತು ಮಳೂರು ಗ್ರಾಮಕ್ಕೆ ಕೊಳವೆ ನೀರು ಪೂರೈಕೆಗಾಗಿ ನಿರ್ಮಿಸಿದ ಮೇಲ್ಮಟ್ಟದ ಜಲಸಂಗ್ರಹಾಲಯದ ಗುಣಮಟ್ಟ ಕಳಪೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಮಳೂರು ಗ್ರಾಮದಲ್ಲಿ ನಿರ್ಮಿಸಿದ ಮೇಲ್ಮಟ್ಟದ ಜಲಸಂಗ್ರಹಾಲಯದಲ್ಲಿ ನೀರು ನಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ಸಂಬಂಧಪಟ್ಟ ಅಧಿಕಾರಿಯವರಿಗೆ ನೋಟೀಸು ನೀಡಲಾಗಿದ್ದು, ಈ ಕಾಮಗಾರಿಯ ಮೇಲೆ ಆಗಿರುವ ವೆಚ್ಚವನ್ನು ಸದರಿಯವರ ಹೆಸರಿನಲ್ಲಿ ಇತರೆ ಮುಂಗಡ ಲೆಕ್ಕದಲ್ಲಿ ಇಡಲಾಗಿದೆ.

ಸೇಡಂ ತಾಲ್ಲೂಕು ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹಾನಿಗೊಳಗಾದ ರಸ್ತೆಗಳು

309 (3066) ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ (ಸೇಡಂ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯಿತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಮುಧೋಳ ಹಂದರಿಕಿ ರಸ್ತೆ ಮದನ ಸಮೀಪ ಜಲ್ಲಿ ಮೊರಮ್ ಕನ್ಸಾಲ್ಡೇಶನ್ ಮಾಡಿದ 1-2 ತಿಂಗಳಲ್ಲಿ ಕಿತ್ತು ಕೊಂಡು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈಗ ಅದೇ ಕಿತ್ತುಕೊಂಡು ಹೋಗಿರುವ ರಸ್ತೆಯ ಮೇಲೆ ಡಾಂಬರೀಕರಣ ಮಾಡುವುದರಿಂದ ಆ ರಸ್ತೆ ಮುಂದೆ ಗಟ್ಟಿಮುಟ್ಟಾಗಿ ಇರ ಬಹುದೇ?

ಇ) ಮುಧೋಳದಿಂದ ಹಂದರಿಕಿ ರಸ್ತೆ ಮದನ ಸಮೀಪ ಜಲ್ಲಿ ಕನ್ಸಾಲ್ಡೇಶನ್ ದುರಸ್ತಿಗಾಗಿ ಖರ್ಚಾಗಿರುವ ಹಣವೆಷ್ಟು? ಇದರ ಕಿ.ಮೀ. ಎಷ್ಟು?

ಈ) ಈ ಪ್ರಕಾರ ಅವ್ಯವಸ್ಥೆಯಾಗಿ ಹದಗೆಟ್ಟಿರುವ ರಸ್ತೆಯಲ್ಲಿ ಅವ್ಯವಹಾರ ಮಾಡಿರುವ ಅಧಿಕಾರಿಗಳ ಮೇಲೆ ಕೈಗೊಳ್ಳುವ ಕ್ರಮವೇನು ಮತ್ತು ಇದನ್ನು ಸರಿಪಡಿಸಿ ಎಂದು ಡಾಂಬರೀಕರಣ ಮಾಡಲಾಗುವುದು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹೌದು

ಆ) ಕೆಲವು ಭಾಗಗಳಲ್ಲಿ ಕನ್ಸಾಲೀಡೇಶನ್ ಸರಿಯಾಗಿ ಆಗಿರುವುದಿಲ್ಲ. ಈ ಭಾಗಗಳನ್ನು ದುರಸ್ಥಿ ಮಾಡಲಾಗಿರುತ್ತದೆ ಮತ್ತು ಡಾಂಬರೀಕರಣವನ್ನು ಪೂರ್ಣಗೊಳಿಸಲಾಗಿದೆ.